**Events Organized by Mysore University Library, University of Mysore, Mysore during 2024-25**

Mysore University Library conducted Orientation programme for recently joined students of various PG departments of University of Mysore for the academic year 2024-25. On the programme students were introduced to the University Library sections, its collection, resources, services and facilities. Students were given practical demo on how to use e-resources and print resources for their academic purpose.



2. ಡಾ. ಎಸ್.ಆರ್.ರಂಗನಾಥನ್ ರವರ 132 ನೇ ಜನ್ಮ ವಾರ್ಷಿಕೋತ್ಸವ ಮತ್ತು ರಾಷ್ಟ್ರೀಯ ಗ್ರಂಥಪಾಲಕರ ದಿನಾಚರಣೆಯ ಸ್ಮರಣಾರ್ಥ, ಮೈಸೂರು ವಿಶ್ವವಿದ್ಯಾನಿಲಯ ಗ್ರಂಥಾಲಯವು ದಿನಾಂಕ 12/08/2024 ರಂದು ಮಧ್ಯಾಹ್ನ 03.00 ಗಂಟೆಗೆ ಮಾನಸಮೀಡಿಯಾ ಸಭಾಂಗಣ, ಮೈಸೂರು ವಿಶ್ವವಿದ್ಯಾನಿಲಯ ಗ್ರಂಥಾಲಯದಲ್ಲಿ ವಿಶೇಷ ಉಪನ್ಯಾಸ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.. ಡಾ. ಬಿ. ನಾಗರಾಜು, ವಾಣಿಜ್ಯಶಾಸ್ತ್ರ ವಿಭಾಗದ ಪ್ರಾಧ್ಯಾಪಕರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ಇವರು "ಗ್ರಂಥಾಲಯದ ಬಳಕೆ: ಅಂದು- ಇಂದು" ವಿಷಯದ ಕುರಿತು ಉಪನ್ಯಾಸ ನೀಡಿದರು, ಡಾ. ಪಿ.ಸರಸ್ವತಿ, ಗ್ರಂಥಪಾಲಕರು, ಮೈಸೂರು ವಿಶ್ವವಿದ್ಯಾಲಯ ಗ್ರಂಥಾಲಯ, ಮೈಸೂರು ವಿಶ್ವವಿದ್ಯಾಲಯ, ಮೈಸೂರು. ಇವರು "ಡಾ. ಎಸ್. ಆರ್. ರಂಗನಾಥನ್ ರವರ ಜೀವನ ಮತ್ತು ಸಾಧನೆ ವಿಷಯದ ಮೇಲೆ ಉಪನ್ಯಾಸ ನೀಡಿದರು. ಮತ್ತು ಡಾ. ಸಿ.ಪಿ. ರಾಮೇಶ್, ವಿಶ್ರಾಂತ ಗ್ರಂಥಪಾಲಕರು, ಮೈಸೂರು ವಿಶ್ವವಿದ್ಯಾನಿಲಯ ಗ್ರಂಥಾಲಯ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು "ಓದುವ ಹವ್ಯಾಸ ಮತ್ತು ವಿಧಾನ" ಕುರಿತು ಉಪನ್ಯಾಸ ನೀಡಿದರು. ರಮೇಶ್ ಎ. ನ್., ಸಹಾಯಕ ಗ್ರಂಥಪಾಲಕರು, ವಿ .ವಿ. ಗ್ರಂಥಾಲಯ ಇವರು ಪ್ರಾರ್ಥನೆಯೊಂದಿಗೆ ಕಾರ್ಯಕ್ರಮ ಪ್ರಾರಂಭವಾಯಿತು ಶ್ರೀಮತಿ ಜಯಶ್ರೀ ಜಗದೀಶ್, ಸಹಾಯಕ

ಗ್ರಂಥಪಾಲಕರು, ವಿ .ವಿ. ಗ್ರಂಥಾಲಯ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ ಎಲ್ಲಾ ಗಣ್ಯರಿಗೆ ಸ್ವಾಗತವನ್ನು ಕೋರಿದರು, ಶ್ರೀ ಈರಣ್ಣ ಬಿ. ತಾತ್ಕಾಲಿಕ ಗ್ರಂಥಾಲಯ ಸಹಾಯಕರು ವಂದನಾರ್ಪಣೆ ಸಲ್ಲಿಸಿದರು.





3. ಮೈಸೂರು ವಿಶ್ವವಿದ್ಯಾನಿಲಯ ಗ್ರಂಥಾಲಯವು, ದಿನಾಂಕ 13/08/2024 ರಂದು ಬೆಳಿಗ್ಗೆ 11.30.00 ಕ್ಕೆ "Tips to crack competitive exams: special reference to The Indian Constitution" ವಿಷಯದ ಮೇಲೆ ಹೆಚ್. ಡಿ. ವಿಶ್ವನಾಥ್, ಶೈಕ್ಷಣಿಕ ಸಂಯೋಜಕರು, ಮಂಡ್ಯ ಕೃಷಿಕ್ ಸರ್ವೋದಯ ಟ್ರಸ್ಟ್, ಮಂಡ್ಯ, ಇವರಿಂದ ವಿಶೇಷ ಉಪನ್ಯಾಸ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಮೈಸೂರು ವಿಶ್ವವಿದ್ಯಾನಿಲಯ ಗ್ರಂಥಾಲಯದ ಗ್ರಂಥಪಾಲಕರಾದ ಡಾ. ಪಿ. ಸರಸ್ವತಿ ರವರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದರು, ಶ್ರೀಮತಿ ಜಯಶ್ರೀ ಜಗದೀಶ್, ಗ್ರಂಥಾಲಯ ಸಹಾಯಕರು, ಮೈಸೂರು ವಿಶ್ವವಿದ್ಯಾನಿಲಯ ಗ್ರಂಥಾಲಯ ಇವರು ಸ್ವಾಗತ ಬಯಸಿದರು. ಈ ಕಾರ್ಯಕ್ರಮಕ್ಕೆ ವಿಶ್ವವಿದ್ಯಾನಿಲಯದ ಎಲ್ಲಾ ವಿಬಾಗದ ವಿದ್ಯಾರ್ಥಿಗಳು, ಸಂಶೋಧಕರು, ಉಪನ್ಯಾಸಕರು ಹಾಗೂ ಗ್ರಂಥಾಲಯದ ಸಿಬ್ಬಂದಿಗಳು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

4. ಮೈಸೂರು ವಿಶ್ವವಿದ್ಯಾನಿಲಯ ಗ್ರಂಥಾಲಯವು, ದಿನಾಂಕ 25/11/2024 ರಂದು ಬೆಳಿಗ್ಗೆ 11.30.00 ಕ್ಕೆ ರಾಷ್ಟ್ರೀಯ ಗ್ರಂಥಾಲಯ ಸಪ್ತಾಹದ ಪ್ರಯುಕ್ತ ವಿಶೇಷ ಉಪನ್ಯಾಸ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಡಾ. ಸುನೀಲ್ ಎಂ. ವಿ., ಅಸಿಸ್ಟೆಂಟ್ ಪ್ರೊಫೆಸರ್, ಸಿಸ್ಟಮ್ಸ್ ಅನ್ಡ್ ಜನರಲ್ ಮ್ಯಾನೇಜ್ಮೆಂಟ್, ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಇನ್ಸ್ಟಿಟ್ಯೂಟ್ ಫಾರ್ ಮ್ಯಾನೇಜ್ಮೆಂಟ್ ಡೆವಲಪ್ಮೆಂಟ್, ಇವರು "From Books to Bytes: A Librarian's Journey with Technology" ವಿಷಯದ ಮೇಲೆ ಉಪನ್ಯಾಸ ನೀಡಿದರು. ಮೈಸೂರು ವಿಶ್ವವಿದ್ಯಾನಿಲಯ ಗ್ರಂಥಾಲಯದ ವಿಶ್ರಾಂತ ಗ್ರಂಥಪಾಲಕರಾದ ಡಾ. ಸಿ. ಪಿ. ರಾಮಶೇಷ್ ರವರು ರಾಷ್ಟ್ರೀಯ ಗ್ರಂಥಾಲಯ ಸಪ್ತಾಹದ ಮಹತ್ವದ ಬಗ್ಗೆ ಉಪನ್ಯಾಸ ನೀಡಿದರು. ಡಾ. ಪಿ. ಸರಸ್ವತಿ ರವರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿ ಅತಿಥಿಗಳ ಪರಿಚಯ ಹಾಗೂ ಅಧ್ಯಕ್ಷರ ಭಾಷಣ ನೀಡಿದರು, ಶ್ರೀಮತಿ ಜಯಶ್ರೀ ಜಗದೀಶ್, ಗ್ರಂಥಾಲಯ ಸಹಾಯಕರು, ಮೈಸೂರು ವಿಶ್ವವಿದ್ಯಾನಿಲಯ ಗ್ರಂಥಾಲಯ ಇವರು ಸ್ವಾಗತ ಬಯಸಿದರು. ಈ ಕಾರ್ಯಕ್ರಮಕ್ಕೆ ವಿಶ್ವವಿದ್ಯಾನಿಲಯದ ಎಲ್ಲಾ ವಿಬಾಗದ ವಿದ್ಯಾರ್ಥಿಗಳು, ಸಂಶೋಧಕರು ಹಾಗೂ ಗ್ರಂಥಾಲಯದ ಸಿಬ್ಬಂದಿಗಳು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.



